PUBLICATION : EE SANJE
DATE : Oct 18, 2012
EDITION : BANGALORE
PAGE : 03

# ಬೆಂಗಳೂರು ಮಧ್ಯರಾತ್ರಿ ಮ್ಯಾರಥಾನ್




ಬೆಂಗಳೂರು,ಅ.17- ಮುಂಬರುವ ಡಿ.15ರಂದು ನಗರದಲ್ಲಿ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್ ನಡೆಯಲಿದೆ.

ಬಹು ನಿರೀಕ್ಷಿತ 6ನೇ ಆವೃತಿಯ ಮಧ್ಯರಾತ್ರಿ ಮ್ಯಾರಥಾನ್ ಕುರಿತು ಇಂದು ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ 2010ರ ಮಿಸ್ ಅರ್ಥ್ ನಿಕೋಲಿ ಎಸ್ಟೀಲಿ ಮತ್ತು ಖ್ಯಾತ ರೂಪದರ್ಶಿ ಮಿಲಿಂದ್ ಸೋಮಾನ್ ಅವರ ಸಮ್ಮುಖದಲ್ಲಿ ಅನಾವರಣಗೊಳಿಸಲಾಯಿತು.

ರೋಟರಿ ಬೆಂಗಳೂರು , ಐಟಿ ಕಾರಿಡಾರ್ (ಆರ್ ಬಿಐಟಿಸಿ)ಮತ್ತು ಇತರೆ ಸಂಸ್ಥೆಗಳು ಇದರ ಪ್ರಾಯೋಜಕತ್ವ ನೀಡುತ್ತಿದ್ದು ಈ ಬಾರಿ 10 ಸಾವಿರಕ್ಕೂ ಹೆಚ್ಚು ಮಂದಿ ಈ ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಈಬಾರಿ ವಿಶೇಷವಾಗಿ ಕರ್ನಾಟಕ ರಿಸರ್ವ್ ಪೊಲೀಸ್ ಪಡೆ ಸುರಕ್ಷತೆ ಒದಗಿಸಲಿದ್ದು ಖ್ಯಾತ ಸೆಲಬ್ರಿಟಿಗಳು, ಐಟಿ ಉದ್ಯೋಗಿಗಳು ಸೇರಿದಂತೆ ಸಾವಿರಾರು ಮಂದಿ ರೋಟರಿ ಬೆಂಗಳೂರು ಐಟಿ ಕಾರಿಡಾರ್ ಆಯೋಜಿಸಿರುವ ಈ ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುತ್ತಿದ್ದು ರನ್ ಫಾರ್ ಬೆಂಗಳೂರು ಅಲಿಟ್ ದಿ ಸ್ಟ್ರೈಕ್ ಆಫ್ ಟ್ವೆಲ್‌ವ್ ಎಂಬ ಘೋಷ ವಾಕ್ಯ ಅಳವಡಿಸಿಕೊಳ್ಳಲಾಗಿದೆ.

ಡಿ.15 ರಾತ್ರಿ 12 ಗಂಟೆಗೆ ವೈಟ್‌ಫೀಲ್ಡ್‌ನಲ್ಲಿ ಮ್ಯಾರಥಾನ್ ಆರಂಭಗೊಳ್ಳಲಿದೆ.

RED MONITORING SERVICE